ವರದಿಯನ್ನು ತರಿಸಿ ಅವರಿಗೆ ಮಾಹಿತಿಯನ್ನು ಪೂರ್ಣವಾಗಿ ಒದಗಿಸುವುದಕ್ಕೆ ಪ್ರಯತ್ನವನ್ನು ಮಾಡುತ್ತೇನೆ.

ಶ್ರೀ ಅಂಜನಮೂರ್ತಿ:- ಮಾನ್ಯ ಅಧ್ಯಕ್ಷರೇ, ಮಾನ್ಯ ಕಂದಾಯ ಮಂತ್ರಿಗಳಲ್ಲೂ ನಾನು ಪ್ರಾರ್ಥನೆ ಮಾಡಿಕೊಳ್ಳುತ್ತಿದ್ದೇನೆ, ಏನಾದರೂ ಆ ಮೆಡಿಸಿನ್ ಫ್ಯಾಕ್ಟರಿಗೆ ಗ್ರಾಂಟ್ ಆಗಿರುವ ಜಮೀನನ್ನು ದಯವಾಡಿ ರದ್ದು ಮಾಡಿ ಆ ಬಡ ಕುಟುಬಗಳಿಗೆ ಕೊಡುವುದಕ್ಕೆ ಪ್ರಯತ್ನವನ್ನು ಮಾಡಬೇಕು ಎಂದು ತಮ್ಮ ಮೂಲಕ ಅವರನ್ನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಇದರ ಬಗ್ಗೆ ಆದರೂ ಸಹ ಒಂದು ಹೇಳಿಕೆಯನ್ನು ಕೊಡಬೇಕು.

Lift Irrigation Scheme hear Malalur village

(2366)Sri C.R.Sageer Ahmed (Chikkamaglore):- Will the Minister of State for Minor Irrigation be pleased to state

a Whether there is any new proposals for Lift Irrigation Scheme for the Atchkat coming under Malalur Village of Chickmagalur Taluk;

b If so, the area covered and benefited from this Lift Irrigation Scheme and the amount spent for the above scheme; (the date of completion of the above project be furnished)?

Sri K.S.Mallikarjuna Prasanna (Minister of State for Minor Irrigation)

a Yes

b Asper the preliminary investigation Report it is contemplated to provide irrigation benefit to an extent of 1000 acres. No expenditure has been incurred on this scheme so far.

This scheme is under preliminary investigation and if found feasible, the work will be taken up depending upon the availability of fund.

ಶ್ರೀ ಸಿ.ಆರ್.ಸಗೀರ್ ಅಹಮದ್ :- ಮಾನ್ಯ ಅಧ್ಯಕ್ಷರೇ, ಚಿಕ್ಕಮಗಳೂರು ತಾಲ್ಲೂಕಿನ ಮಳಲೂರು ಗ್ರಾಮದಲ್ಲಿ ಒಂದು ಏತನೀರಾವರಿ ಯೋಜನೆ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿದೆಯೇ ಎಂದು ಕೇಳಿದ್ದಕ್ಕೆ ಬಂದಿದೆ ಎಂದು ಹೇಳಿದ್ದಾರೆ. ಇದರಿಂದ ಒಂದು ಸಾವಿರ ಎಕರೆಯಷ್ಟು ಜಮೀನಿಗೆ ನೀರಾವರಿಯಾಗುತ್ತದೆ ಎಂದು ಹೇಳಿದ್ದಾರೆ. ಆದರೆ ಇದು ಪರಿಶೀಲನೆಯಲ್ಲಿದೆ, ಜೊತೆಗೆ ಹಣದ ಒಂದು ವ್ಯವಸ್ಥೆಯ ಮೇಲೆ ಈ ಕಾಮಗಾರಿಯನ್ನು ನಾವು ತೆಗೆದುಕೊಳ್ಳುತ್ತೇವೆ ಎಂದು ಹೇಳಿದ್ದಾರೆ. ಮಾನ್ಯ ಮಂತ್ರಿಗಳಲ್ಲಿ ನನ್ನ ಪ್ರಶ್ನೆ ಏನೆಂದರೆ, ಇದು ಮೊದಲನೇ ಬಾರಿಗೆ ಚಿಕ್ಕ ಮಗಳೂರು ತಾಲ್ಲೂಕಿನಲ್ಲಿ ಏತನೀರಾವರಿಯ ಒಂದು ಪ್ರಶ್ನೆ ಉದ್ಭವವಾಗಿದೆ. ಇದು ಸರ್ಕಾರದ ಗಮನಕ್ಕೆ ಬಂದಿದೆ. ತಾವು ನಮ್ಮ ಚಿಕ್ಕಮಗಳೂರು ಜಿಲ್ಲೆಯ ಉಸ್ತುವಾರಿ ಸಚಿವಾಗಿದ್ದರೂ ಸಹ

ಈ ಕಾರ್ಯಕ್ರಮವನ್ನು ಯಾವತ್ತಿನಿಂದ ಪ್ರಾರಂಭ ಮಾಡುತ್ತೀರಿ? ಇದಕ್ಕೆ ತಕ್ಕಂತೆ ಹಣ ಬಜೆಟ್‌ನಲ್ಲಿ ಒದಗಿಸಿಕೊಂಡಿದ್ದೀರೋ? ಅಷ್ಟಾವಾ ತಾವು ಇನ್ನೂ ಇತರೆ ಸಂಸ್ಥೆಗಳಿಂದ ಸಾಲ ಪಡೆಯುವಂಥದ್ದರಲ್ಲಿ ಇದನ್ನು ಏನಾದರೂ ಸೇರಿಸಿ ಇದಕ್ಕೆ ಆಗತಕ್ಕಂಥ ವೆಚ್ಚದ ಹಣವನ್ನು ತರಿಸಿ ಈ ಕೆಲಸವನ್ನು ಪ್ರಾರಂಭ ಮಾಡುತ್ತೀರೋ ಎನ್ನುವುದು ನನ್ನ ಪ್ರಶ್ನೆ.

ಶ್ರೀ ಕೆ.ಎಸ್.ಮಲ್ಲಿಕಾರ್ಜುನ ಪ್ರಸನ್ನ :- ಮಾನ್ಯ ಅಧ್ಯಕ್ಷರೇ, ಯೋಜನೆಯ ಪೂರ್ಣ ವರದಿ ತಯಾರಾಗುತ್ತಿದೆ. ಅದು ಆದನಂತರ ಯೋಜನೆಯು ಫೀಸಿಬಿಲಿಟಿ ಎಂದು ಕಂಡುಬಂದಲ್ಲಿ ನಾವು ಅದನ್ನು ನಬಾರ್ಡ್‌ಗೆ ವಹಿಸುತ್ತೇವೆ. ಕಾರ್ಪೊರೇಷನ್‌ನಿಂದ ಬರತಕ್ಕಂಥ ಎಲ್ಲಾ ಲಿಫ್ಟ್ ಇರಿಗೇಷನ್‌ಗಳನ್ನೂ ಸಹಿತ ಸಾಲಸೌಲಭ್ಯಕ್ಕೋಸ್ಕರ ಬ್ಯಾಂಕುಗಳಿಗೆ ನಾವು ಕಳುಹಿಸುತ್ತಿದ್ದೇವೆ. ಕೆಲವು ಈಗಾಗಲೇ ಪೂರ್ಣವಾಗಿ ಸುಮಾರು ಎಂಟು ಯೋಜನೆಗಳನ್ನು ಮೈಸೂರು ಕಾವೇರಿ ಜಲಾಶಯದಲ್ಲಿ ನಾಲ್ಕು ಯೋಜನೆಗಳನ್ನು ಕೃಷ್ಣ ಜಲಾಶಯದಲ್ಲಿ ತೆಗೆದುಕೊಳ್ಳುತ್ತಿದ್ದೇವೆ. ಸದ್ಯದಲ್ಲೇ ಕೆಲಸಗಳನ್ನು ತೆಗೆದುಕೊಳ್ಳುತ್ತಿದ್ದೇವೆ. ನಮ್ಮ ಮಿತ್ರರು ಜಿಲ್ಲಾ ಸಚಿವರು ಇದ್ದಾರೆ ಎಂದು ಹೇಳಿದರು. ಆದ್ಯತೆಯ ಮೇರೆಗೆ ಯೋಜನೆ ತಯಾರು ಮಾಡಿ ನಬಾರ್ಡ್‌ಗೆ ಕಳುಹಿಸಿ, ಸ್ಯಾಂಕ್ಷನ್ ಆದರೆ ಫೀಸಿಬಿಲಿಟಿ ಎಂದು ಕಂಡುಬಂದರೆ ಖಂಡಿತವಾಗಿಯೂ ತೆಗೆದುಕೊಳ್ಳುತ್ತೇವೆ ಎನ್ನತಕ್ಕಂಥ ಮಾತನ್ನು ಹೇಳುತ್ತೇವೆ.

ಶ್ರೀ ಸಿ.ಆರ್.ಸಗೀರ್ ಅಹಮದ್:- ಮಾನ್ಯ ಅಧ್ಯಕ್ಷರೆ, ನನಗೆ ಅಸಿಸ್ಟೆಂಟ್ ಎಕ್ಸಿಕ್ಯೂಟಿವ್ ಇಂಜಿನಿಯರ್‌ರವರು ಇದು ಫೀಸಿಬಿಲಿಟಿ ಇದೆ ಎಂದು ಕಾಗದವನ್ನು ಬರೆದಿದ್ದಾರೆ. ಆದ್ದರಿಂದ ಆದ್ಯತೆಯ ಮೇರೆಗೆ ತೆಗೆದುಕೊಳ್ಳುವುದಕ್ಕೆ ನಾನು ಮಾನ. ಮಂತ್ರಿಗಳಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ

ಶ್ರೀ ಕೆ.ಎಸ್.ಮಲ್ಲಿಕಾರ್ಜುನ ಪ್ರಸನ್ನ:- ಖಂಡಿತವಾಗಿ ಮಾಡಲಾಗುವುದು.

ಶ್ರೀ ಬಿ.ಎಸ್.ಯಡಿಯೂರಪ್ಪ:-ಮಾನ್ಯ ಅಧ್ಯಕ್ಷರೆ, ಕೃಷ್ಣ ಕಾವೇರಿ ಬೇಸಿನ್‌ನಲ್ಲಿ ಲಿಫ್ಟ್ ಇರಿಗೇಷನ್‌ಗೋಸ್ಕರ ಎರಡೂ ಕಾರ್ಪೊರೇಷನ್‌ಗಳನ್ನು ನಾವು ಮಾಡಿದ್ದೇವೆ. ಆದರೆ ಇದುವರೆಗೂ ಅಂದರೆ 4-5 ವರ್ಷವಾದರೂ ಕೃಷ್ಣ ಕಾವೇರಿ ಬೇಸಿನ್‌ನಲ್ಲಿ ಲಿಫ್ಟ್ ಇರಿಗೇಷನ್‌ನಲ್ಲಿ ಯಾವುದೇ ಕೆಲಸವನ್ನು ನೀವು ತೆಗೆದುಕೊಂಡಿಲ್ಲ. ಅದು ಏನಾದರೂ ಪ್ರಗತಿ ಹಂತದಲ್ಲಿದೆಯೇ ? ಕೆಲಸ ಏನಾದರೂ ತೆಗೆದುಕೊಂಡಿದ್ದೀರಾ ಎನ್ನುವುದರ ಬಗ್ಗೆ ಸ್ಪಷ್ಟೀಕರಣವನ್ನು ನೀಡಬೇಕು.

ಶ್ರೀ ಕೆ.ಎಸ್.ಮಲ್ಲಿಕಾರ್ಜುನ ಪ್ರಸನ್ನ :- ಬಜೆಟ್ ಭಾಷಣದಲ್ಲಿ ತಾವು ಇರಲಿಲ್ಲ. ತಾವು ಹೊರಗಡೆ ಇದ್ದೀರಿ. ನಾವು 5-5 ನಿಮಿಷಕ್ಕೆ ನಮ್ಮ ನಮ್ಮ ಬೇಡಿಕೆಗಳನ್ನು ಮುಗಿಸಿಕೊಂಡು ಹೋದೆವು. ಊಟಕ್ಕೆ ಟೈಂ ಆಗುತ್ತದೆಂದು ಬೇಗ ಮುಗಿಸಿಕೊಂಡು ಹೊರಟು ಹೋದೆವು.

ಅಧ್ಯಕ್ಷರು:-ಅದು ಕರೆಕ್ಟ್ ಊಟದ ಟೈಂಗೆ ಹೊರಟು ಹೋಗಿಬಿಟ್ಟಿರಿ.

ಶ್ರೀ ಕೆ.ಎಸ್.ಮಲ್ಲಿಕಾರ್ಜುನ ಪ್ರಸನ್ನ:- ಇವರು ಯಾರೂ ಇರಲಿಲ್ಲ. ಕೇಳುವವರು ಯಾರೂ ಇರಲಿಲ್ಲ. ಬಹುತೇಕ ಲಿಫ್ಟ್ ಇರಿಗೇಷನ್ ಕಾರ್ಪೋರೇಷನ್ ವಿಚಾರ ಬಂದಾಗ ಈ ಪ್ರಶ್ನೆ ಉದ್ಭವಿಸುತ್ತದೆ, ಯಾರಾದರೂ ಹೇಳುತ್ತಾರೆ ಎನ್ನುವುದು ಗೊತ್ತಿದೆ. ಏತ ನೀರಾವರಿ ಯೋಜನೆಯಡಿಯಲ್ಲಿ ಪಂಚವಾರ್ಷಿಕ ಯೋಜನೆಯಡಿಯಲ್ಲಿ, ಈ ಕೃಷ್ಣ ಜಲಾಶಯದಲ್ಲಿ 300 ಯೋಜನೆಗಳನ್ನು ನಾವು ಈಗಾಗಲೇ ತಯಾರು ಮಾಡಿದ್ದೇವೆ. ಸುಮಾರು 172ಕೋಟಿ ರೂಪಾಯಿಯ ಅಂದಾಜಿನಲ್ಲಿ 50 ಸಾವಿರ ಹೆಕ್ಟೇರ್‌ಗಳನ್ನು ಮಾಡತಕ್ಕ ಕಾರ್ಯಕ್ರಮವನ್ನು ಹಾಕಿಕೊಂಡಿದ್ದೇವೆ. ಅದು ಈಗಾಗಲೇ 8 ಯೋಜನೆಗಳು ತಯಾರಾಗಿವೆ. ನಬಾರ್ಡ್‌ನಿಂದ ಮಂಜೂರಾಗಿದೆ, ದುಡ್ಡು

ಸಹಿತ ಬಂದಿದೆ. ಮತ್ತು ಗೌರ್ನಮೆಂಟ್‌ನಿಂದ ಹಣವೂ ಸಹ ಬಿಡುಗಡೆಯಾಗಿದೆ. ಈ ಅಧಿವೇಶನ ಮುಗಿದ ಕೂಡಲೆ ನಾವು ಮುಖ್ಯಮಂತ್ರಿಗಳ ಜೊತೆಗೂಡಿ ಕಲ್ಲನ್ನು ಹಾಕಿಸತಕ್ಕ ಕಾರ್ಯಕ್ರಮವನ್ನು ಹಾಕಿಕೊಂಡು ಮಾಡುತ್ತೇನೆ. ಕೃಷ್ಣ ಯೋಜನೆಯಲ್ಲಿ ಸುಮಾರು 4 ಯೋಜನೆಗಳು ಈಗಾಗಲೇ ಪೂರ್ತಿಯಾಗಿದೆ. ನಬಾರ್ಡಿನಿಂದ ಮಂಜೂರಾಗಿ ಬಂದಿದೆ. ಮತ್ತು ನಮ್ಮ ಸರ್ಕಾರದಿಂದ ಶೇಕಡ 25 ರಷ್ಟು ಬಿಡುಗಡೆಯಾಗಿದೆ. ಚಿಕ್ಕರಸವಿ ಅಡವಿಳುತೊಳಬಾವಿ, ಕಾರಗಾಣ, ಲಿಂಗಾಪುರ ಎನ್ನತಕ್ಕ ನಾಲ್ಕು ಕಡೆಗಳಿಗೆ ನಾಲ್ಕು ಯೋಜನೆಗಳಿಗೆ ಕೂಡಲೇ ಒಂದು ವಾರದಲ್ಲಿ ಅಡಿಗಲ್ಲನ್ನು ಹಾಕಲಿಕ್ಕೆ ನಾವು ಪ್ರಯತ್ನ ಮಾಡುತ್ತಿದ್ದೇವೆ. ಅದರ ಬಗ್ಗೆ ಯಾವ ಯೋಚನೆ ಇಲ್ಲ. ತಮ್ಮ ಕಾಲದಲ್ಲಿ ರೈಲು ಹೇಗೆ ಬಿದ್ದುಹೋಯಿತೋ ಹಾಗೆ ನಮ್ಮ ಕಾಲದಲ್ಲಿ ಬೀಳುವುದಿಲ್ಲ.

(ಗೊಂದಲ)

ಶ್ರೀ ಕೆ.ಎಸ್.ಮಲ್ಲಿಕಾರ್ಜುನ ಪ್ರಸನ್ನ:- ಆ ರೈಲನ್ನು ನಾವು ಸರಿಮಾಡಿ ಒಂದು ಹಂತಕ್ಕೆ ತಂದು ಮೇಲೆ ನಿಲ್ಲಿಸಿ ಸ್ಟಾರ್ಟ್ ಮಾಡಿಸಿದರೆ ಅದು ಎಷ್ಟು ಬೇಗನೆ ಓಡಿಹೋಗುತ್ತದೆ ಎನ್ನತಕ್ಕದ್ದನ್ನು ತಾವು ನೋಡಿದರೆ ಇನ್ನು ಮುಂದಿನ 6ತಿಂಗಳಲ್ಲಿ ಅತ್ಯಂತ ಪ್ರಗತಿಯುತವಾದಂತಹ ಕಾರ್ಯಕ್ರಮ ಹಾಕಿಕೊಂಡಿದ್ದೇವೆ ಎನ್ನುವುದು ತಿಳಿಯುತ್ತದೆ. ಸುಮಾರು 1992-93 ರಲ್ಲಿ 50 ಕಾರ್ಖಾನೆಗಳನ್ನು ತೆಗೆದುಕೊಳ್ಳಬೇಕೆಂದು ಇದ್ದೇವೆ. ಅದಕ್ಕೆ ತಗಲುವ ವೆಚ್ಚ 20 ಕೋಟಿ ರೂಪಾಯಿಗಳು. 8185 ಹೆಕ್ಟೇರುಗಳನ್ನು ನಾವು ಮಾಡುತ್ತಿದ್ದೇವೆ. ಹಾಗೆಯೇ8ನೇ ಪಂಚವಾರ್ಷಿಕ ಯೋಜನೆಯಲ್ಲಿ , ಕೃಷ್ಣಾ ಜಲಾಶಯದ 404 ಕಾರ್ಯಕ್ರಮಗಳನ್ನು ತೆಗೆದುಕೊಂಡು 246 ಕೋಟಿ ರೂಪಾಯಿಗಳ ಅಂದಾಜಿನಲ್ಲಿ1.12 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ನೀರಾವರಿ ಮಾಡಬೇಕೆಂದಿದ್ದೇವೆ. 1992-93ಕ್ಕೆ.... ತಾವು ನಗುವುದು ಅಲ್ಲ. ನಾವು ಮಾಡುತ್ತೇವೆ.

ಶ್ರೀ ಸಿ.ಬೈರೇಗೌಡ:- ನಾವು ನಕ್ಕಿದ್ದು ಏಕೆ ಎಂದರೆ, 8185 ಯೋಜನೆಗಳು ಎಂದು ಹೇಳಿಬಿಟ್ಟರು. ಅದಕ್ಕೋಸ್ಕರ ಏನಪ್ಪ ಎಂದು ಗಾಬರಿಯಾಯಿತು.

ಶ್ರೀ ಕೆ.ಎಸ್.ಮಲ್ಲಿಕಾರ್ಜುನ ಪ್ರಸನ್ನ:- ಅದು ಹೆಕ್ಟೇರ್, ಹೆಕ್ಟೇರ್ . . . .

ಶ್ರೀ ಸಿ.ಬೈರೇಗೌಡ :- ಅದಕ್ಕೋಸ್ಕರ ನನಗೆ ಗಾಬರಿಯಾಯಿತು:

ಶ್ರೀ ಕೆ.ಎಸ್.ಮಲ್ಲಿಕಾರ್ಜುನ ಪ್ರಸನ್ನ:- ನಾನು ಹೆಕ್ಟೇರ್ ಎಂದು ಹೇಳಿದ್ದು. ತಮಗೆ ಬಹುಶ: ಕೇಳಿಸಲಿಲ್ಲ ಎಂದು ಕಾಣುತ್ತದೆ. ಈಗ ಸುಮಾರು 1.12ಲಕ್ಷ ಹೆಕ್ಟೇರ್ ಪ್ರದೇಶವನ್ನು ನಾವು ಕೃಷಿ ಜಲಾಶಯದಲ್ಲಿ ಮಾಡಬೇಕೆಂದು ಇದ್ದೇವೆ. ಅದಕ್ಕೆ ಹಣಕಾಸಿನ ಸೌಲಭ್ಯ ಸಿಗುತ್ತಿದೆ. ಇವತ್ತು ಪಿಎಲ್‌ಡಿ ಬ್ಯಾಂಕ್‌ನವರು ಸಹ 10 ಕೋಟಿ ರೂಪಾಯಿಗಳನ್ನು ಕೊಡುತ್ತೇವೆಂದು ಹೇಳಿದ್ದಾರೆ. ನಬಾರ್ಡ್‌ನವರು 10 ಕೋಟಿ ರೂಪಾಯಿಯನ್ನು ಕೊಡುತ್ತೇವೆಂದು ಹೇಳಿದ್ದಾರೆ. ಸರ್ಕಾರದ ವತಿಯಿಂದ ಶೇಕಡ 25 ರಷ್ಟು ಅಂದರೆ ಒಂದು ಕೋಟಿ ರೂಪಾಯಿಗಳನ್ನು ಈಗಾಗಲೇ ನಾವು ಬಿಡುಗಡೆ ಮಾಡಿಸಿ ಇಟ್ಟಿದ್ದೇವೆ. ಆ ಕಾರಣಕ್ಕಾಗಿ ತಾವು ಯಾರು ಸಹಿತ ಅದರ ಬಗ್ಗೆ ಕಾಳಜಿ ಮಾಡಬೇಕಾಗಿಲ್ಲ. ಖಂಡಿತವಾಗಿಯೂ ಅತ್ಯಂತ ಶೀಘ್ರವಾಗಿ ಈ ಜಲಾಶಯದ ಕೆಲಸವನ್ನು ಮಾಡಿಸುತ್ತೇವೆಂದು ಈ ಸದನದಲ್ಲಿ ಭರವಸೆಯನ್ನು ತಮ್ಮ ಮೂಲಕ ಕೊಡಲಿಕ್ಕೆ ಬಯಸುತ್ತೇನೆ.

ಶ್ರೀ ಎಸ್.ಹೆಚ್.ಕೌಜಲಗಿ:-ಇವತ್ತಿನ ದಿವಸ ನಾವು ಒಂದೇ ಒಂದು ಪ್ರಶ್ನೆ ಕೇಳುವುದೇನೆಂದರೆ, ಈ ಲಿಫ್ಟ್ ಇರಿಗೇಷನ್ ಕಾರ್ಪೊರೇಷನ್ ಬಿಜಾಪುರದಲ್ಲಿ ಇವತ್ತಿನವರೆಗೂ ಒಂದು ಕೆಲಸ ಪೂರ್ಣ ಮುಗಿಸಿದೆಯೇ ಎಂದು ಕೇಳುತ್ತೇನೆ. Whether you have completed even one work through this Lift Irrigation Corpora-

tion?

ಶ್ರೀ ಕೆ.ಎಸ್.ಮಲ್ಲಿಕಾರ್ಜುನ ಪ್ರಸನ್ನ:- ಇದರಲ್ಲಿ ಏನಾಗಿದೆ ಅಂದರೆ, ತಮ್ಮ ಕೂಸನ್ನು ನಮಗೆ ಕೊಟ್ಟು ಸಾಕು ಸಾಕು ಎಂದು ಹೇಳಿದರೆ ಹೇಗೆ ?

ಶ್ರೀ ಎಸ್.ಹೆಚ್.ಕೌಜಲಗಿ:- ತಾವು ಒಂದೇ ಒಂದು ಕೆಲಸವನ್ನು ಮಾಡಿಲ್ಲ. 1986ರಲ್ಲಿ ಈ ಕಾರ್ಪೊರೇಷನ್ ಉದ್ಘಾಟಿಸಿತು. ಈ ಕಾರ್ಪೊರೇಷನ್ ಆದನಂತರ ಇವತ್ತಿನ ತನಕ ಲಿಫ್ಟ್ ಇರಿಗೇಷನ್ ಕಾರ್ಪೊರೇಷನ್‌ನಲ್ಲಿ ತಾವು ಒಂದು ಕೆಲಸವನ್ನು ಮಾಡಿ ಮುಗಿಸಿದ್ದೀರಾ ಎಂದು ಕೇಳುತ್ತೇನೆ.

ಶ್ರೀ ಕೆ.ಎಸ್ ಮಲ್ಲಿಕಾರ್ಜುನ ಪ್ರಸನ್ನ:- ಇವರು ತಮ್ಮ ಕೂಸನ್ನು ನಮಗೆ ಕೊಟ್ಟು ಚೆನ್ನಾಗಿ ಸಾಕು ಎಂದು ಹೇಳುತ್ತಾರೆ. ಅದು ಹೇಗಿದೆ ಅಂದರೆ ಖಾಯಿಲೆ ಕಸಾಲೆ ಏನೇನೋ ಆಗಿ ಬಹಳ ರಂಪಾಗಿ ಹೋಗಿದೆ ಮತ್ತು ಅದಕ್ಕೆ ರೋಗಗಳು ಇವೆ. ಅದನ್ನು ಡಾಕ್ಟರ್ ಹತ್ತಿರ ತಂದು ಇಂಜೆಕ್ಷನ್ ಕೊಡಿಸಿ ರೆಡಿ ಮಾಡಿ ಓಡಾಡತಕ್ಕ ಒಂದು ಮಗುವಾಗಿ ಮಾಡಿದ್ದೇವೆ. ಈ ಕೆಲಸವನ್ನು ಮಾಡುತ್ತೇವೆ. ನಾನು ಮಾನ್ಯ ಕೌಜಲಗಿಯವರನ್ನು ಸಹಿತ ಅಲ್ಲಿಗೆ ಕರೆದುಕೊಂಡು ಹೋಗುತ್ತೇನೆ. ನೀವು ವಿರೋಧ'ಪಕ್ಷದಲ್ಲಿದ್ದುಕೊಂಡು ಮಾತನಾಡಬೇಕೆಂದು ಮಾತನಾಡುತ್ತೀರಿ. ಅಡವಿನತೊಳಬಾವಿಯಾಗಿದೆ, ಲಿಂಗಾಪುರ ಆಗಿದೆ.

ಶ್ರೀ ವಾಟಾಳ್ ನಾಗರಾಜ್:- ಆ ಕೂಸು ಬದುಕುತ್ತದೆಯೇ

ಶ್ರೀ ಎಸ್. ಮಲ್ಲಿಕಾರ್ಜುನ ಪ್ರಸನ್ನ:- ಬದುಕಿದರೆ ನಾವೆಲ್ಲ ಫಾರಿನ್‌ನಿಂದ ಇಂಜೆಕ್ಷನ್ ತರಿಸಿ ಅದಕ್ಕೆ ಕೊಟ್ಟು ಏನೇನೊ ಮಾಡಿದ್ದೇವೆ. ಚಿಕ್ಕಆಸವಿ ಸುಮಾರು 23 ಲಕ್ಷ ರೂಪಾಯಿಗಳ ಯೋಜನೆ. ಅಡವಿಯ ತೊಳಬಾವಿ ಸುಮಾರು 2ಕೋಟಿ ರೂಪಾಯಿಯ ಒಂದು ಯೋಜನೆ. ಕಾರಾಗಾಣ 25 ಲಕ್ಷ, ಲಿಂಗಪುರ 50 ಲಕ್ಷ ರೂಪಾಯಿಯ ಯೋಜನೆಗಳನ್ನು ನಾವು ಕೈಗೆತ್ತಿಕೊಂಡಿದ್ದೇವೆ. (11-50 ಎ.ಎಂ.) ಎಂಟು ಯೋಜನೆಗಳನ್ನು ನಮ್ಮ ಮೈಸೂರು ಲಿಫ್ಟ್ ಇರಿಗೇಷನ್ ಕಾರ್ಪೊರೇಷನ್‌ನಲ್ಲಿ ನಾವು ಇಟ್ಟುಕೊಂಡಿದ್ದೇವೆ. ಅದನ್ನು ಏನಾದರು ಮಾಡಿ ಉಳಿಸಬೇಕು. I don't want to proceed over with those liquidation corporations ಎನ್ನತಕ್ಕಂಥ ತೀರ್ಮಾನವನ್ನು ನಾವು ಕೈಗೊಂಡಿದ್ದೇವೆ. ನಿಮ್ಮೆಲ್ಲರ ಸಹಕಾರ ಇದ್ದರೆ ಖಂಡಿತವಾಗಿಯೂ ಲಿಕ್ವಿಸೇಷನ್ ಆಗುವುದಿಲ್ಲ. ಅದು ಕೆಲಸ ಮಾಡಿಯೇ ಮಾಡುತ್ತದೆ . ಒಳ್ಳೆಯ ರಿಸಲ್ಟ್‌ನ್ನೂ ಸಹ ತಂದುಕೊಂಡುತ್ತದೆ ಎನ್ನತಕ್ಕಂಥ ಮಾತನ್ನು ಮಾನ್ಯ ಸಭಾಧ್ಯಕ್ಷರ ಮುಖಾಂತರ ತಮಗೆ ಹೇಳಬಯಸುತ್ತೇನೆ.

ಜಿಲ್ಲಾ ಪರಿಷತ್ ರಸ್ತೆಗಳನ್ನು ವಹಿಸಿಕೊಳ್ಳುವುದು.

(951)ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಜಿಲ್ಲಾಪರಿಷತು, ವ್ಯಾಪ್ತಿಯಿಂದ ಈ ವರ್ಷ ಎಷ್ಟು ಕಿಲೋಮೀಟರ್ ರಸ್ತೆಯನ್ನು ಲೋಕೋಪಯೋಗಿ ಇಲಾಖೆಯ ವಶಕ್ಕೆ ತೆಗೆದುಕೊಳ್ಳಲು ಸರ್ಕಾರ ತೀರ್ಮಾನಿಸಿದೆ.

ಶ್ರೀ ಜಿ.ಹೆಚ್.ಅಶ್ವತ್ಥರೆಡ್ಡಿ (ಲೋಕೋಪಯೋಗಿ ಸಚಿವರು)

ಸರ್ಕಾರದ ಆದೇಶ ಸಂಖ್ಯೆ : ಪಿಡಬ್ಲ್ಯೂಡಿ 68 ಸಿಆರ್‌ಎಂ 89 ದಿನಾಂಕ: 18-2-92ರ ಪ್ರಕಾರ, ಜಿಲ್ಲಾ ಪರಿಷತ್‌ಗಳ ವ್ಯಾಪ್ತಿಯಲ್ಲಿರುವ ರಸ್ತೆಗಳಲ್ಲಿ ಪ್ರತಿ ವಿಧಾನ ಸಭಾ ಕ್ಷೇತ್ರದಲ್ಲಿ 50 ಕಿ.ಮೀ. ಮೀರದಂತೆ ಒಟ್ಟು 10,000 ಕಿ.ಮೀ. ಉದ್ದದ ರಸ್ತೆಗಳನ್ನು